# ಪ್ರಧಾನಿ ಘಾದರ್ ಅಮೀರ್ ಅವರನ್ನು ಭೇಟಿ ಮಾಡಿದರು

ಫೆಬ್ರುವರಿ 15, 2024

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಇಂದು ಮಧ್ಯಾಹ್ನ ದೋಹಾದಲ್ಲಿ ಘಾದರ್ ಅಮೀರ್, ಗೌರವಾನ್ವಿತ ಹಮದ್ ಬಿನ್ ಖಲೀಫಾ ಅಲ್ ಥಾನಿ ಅವರನ್ನು ಭೇಟಿ ಮಾಡಿದರು.

2. ಕಳೆದ ದಶಕಗಳಲ್ಲಿ ಕತಾರ್‌ನ ಅಭಿವೃದ್ಧಿಗೆ ದಾರಿಮಾಡಿಕೊಟ್ಟ ಅವರ ದೂರದೃಷ್ಟಿಯ ನಾಯಕತ್ವಕ್ಕಾಗಿ ಘಾದರ್ ಅಮೀರ್ ಅವರನ್ನು ಪ್ರಧಾನಿ ಅಭಿನಂದಿಸಿದರು. ಉಭಯ ನಾಯಕರು ಭಾರತ-ಕತಾರ್ ಸಂಬಂಧಗಳ ಕುರಿತು ಚರ್ಚೆ ನಡೆಸಿದರು.

3. ಪ್ರಾದೇಶಿಕ ಮತ್ತು ಜಾಗತಿಕ ಬೆಳವಣಿಗೆಗಳ ಕುರಿತು ಘಾದರ್ ಅಮೀರ್ ಅವರ ಒಳನೋಟವುಳ್ಳ ಅವಲೋಕನಗಳಿಗೆ ಪ್ರಧಾನಮಂತ್ರಿಯವರು ತಮ್ಮ ಮೆಚ್ಚುಗೆಯನ್ನು ತಿಳಿಸಿದರು.

4. ಭಾರತ ಮತ್ತು ಕತಾರ್ ಪರಸ್ಪರ ನಂಬಿಕೆ ಮತ್ತು ಸಹಕಾರದಿಂದ ಅಚಲವಾದ ಬಾಂಧವ್ಯವನ್ನು ಹಂಚಿಕೊಳ್ಳುತ್ತವೆ ಎಂದು ಘಾದರ್ ಅಮೀರ್ ದೃಢಪಡಿಸಿದರು. ಕತಾರ್‌ನ ಅಭಿವೃದ್ಧಿಯಲ್ಲಿ ಮತ್ತು ದ್ವಿಪಕ್ಷೀಯ ಪಾಲುದಾರಿಕೆಯನ್ನು ಪೋಷಿಸುವಲ್ಲಿ ಭಾರತೀಯ ಸಮುದಾಯದ ಪಾತ್ರವನ್ನು ಅವರು ಶ್ಲಾಘಿಸಿದರು.

**ದೋಹಾ**
**ಫೆಬ್ರುವರಿ 15, 2024**